

## ಸತ್ಯ ನಿದರ್ಶನ

‘ಹೊಸ ತರಗತಿಗೆ ಹೊಸ ಯೋಜನೆ’ (ನ. 20, ಜಿ.ವಿ. ಅರುಣ) ಪ್ರಬಂಧ ಅರ್ಥಪೂರ್ಣ ಹಾಗೂ ಈಗಿನ ತಾಂತ್ರಿಕ ಯುಗದಲ್ಲಿ ಮಕ್ಕಳ ಮಾನಸಿಕ ತುಮುಲಗಳ ಸತ್ಯ ನಿದರ್ಶನವಾಗಿದೆ.

—ಸಖಾರಾಮ್ ನಾಯಕ್ ರಾಣೆ

## ಬಾಲ್ಯ ನೆನಪಿಸಿತು

ಶಾಲಾ ದಿನಗಳನ್ನು ನೆನಪಿಗೆ ತಂದ ಪ್ರಬಂಧ. ಅಮ್ಮನನ್ನು ಮಧ್ಯವರ್ತಿಯನ್ನಾಗಿಸಿ ನಮ್ಮ ಚಿಕ್ಕ ಪುಟ್ಟ ಬೇಡಿಕೆಗಳನ್ನು ಅಪ್ಪನ ಮುಂದಿಡುತ್ತಿದ್ದೆವು. ಫಲಿತಾಂಶ ಕೆಲವೊಮ್ಮೆ ನಮ್ಮ ಪರವಾಗಿಯೂ ಇನ್ನೊಮ್ಮೆ ಅಪ್ಪನಿಂದ ನಿರಾಕರಣವೂ ಬರುತ್ತಿತ್ತು.

— ಪ್ರಭಾಪ್ರಸಾದ್, ಬೆಂಗಳೂರು

## ಸುಂದರ ‘ಚೆನ್ನುಡಿ’

‘ವೇಣುಗ್ರಾಮದ ವೇಣುನಿನಾದ’ (ನ. 20, ಮಧುರಾ ಕರ್ಣಂ) ‘ಚೆನ್ನುಡಿ’ ಸುಂದರವಾಗಿದೆ. ಬರಹದ ಶೈಲಿ, ಭಾಷೆ ಮತ್ತು ಭಾವನೆಗಳನ್ನು ದಾಟಿಸಿದ ಪರಿ ಇವೆಲ್ಲವೂ ಮನಸ್ಸಿಗೆ ಹತ್ತಿರವಾದವು.

—ಪುಟ್ಟಶಾಮಯ್ಯ ಮರಿಯಪ್ಪ, ಬೆಂಗಳೂರು

## ಪುಣ್ಯಭೂಮಿ ನೋಡಬೇಕೆನಿಸಿತು

‘ಬಸವ ನಿರ್ಗಮನ’ (ನ. 20, ಮಹಾಂತೇಶ ನವಲಕಲ್) ಕಥೆ ಬಸವಣ್ಣನ ಕುರಿತು ಅನೇಕ ವಿಷಯಗಳನ್ನು ತಿಳಿಸಿ, ಹನ್ನೆರಡನೇ ಶತಮಾನಕ್ಕೆ ಕರೆದೊಯ್ದಿತು. ಬಾಗೇವಾಡಿಗೆ ಹೋಗಿ ಆ ಪುಣ್ಯ ಭೂಮಿಯನ್ನು ನೋಡಬೇಕೆನಿಸಿತು.

—ಟಿ.ಎಸ್. ಕುಪ್ಪಣ್ಣ, ಶಕ್ತಿನಗರ

## ಎಚ್ಚರಿಕೆಯ ಗಂಟೆ



‘ಡಿಜಿಟಲ್ ಅರೆಸ್ಟ್’ (ನ. 20, ಇ.ಎಸ್. ಸುಧೀಂದ್ರ ಪ್ರಸಾದ್) ಸೈಬರ್ ಅಪರಾಧ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿರುವುದು ಆತಂಕ ಸೃಷ್ಟಿಸಿದೆ. ಸೈಬರ್ ಕ್ರೈಂ ವಿಭಾಗ ಈ ನಿಟ್ಟಿನಲ್ಲಿ ಇನ್ನಷ್ಟು ಕೆಲಸ ನಿರ್ವಹಿಸಬೇಕಾಗಿದೆ. ಜನರೂ ಎಚ್ಚರ ವಹಿಸಬೇಕು. ಉಪಯುಕ್ತ ಮಾಹಿತಿಗಳೊಂದಿಗೆ ಎಚ್ಚರಿಕೆ ಗಂಟೆಯಾದ ಲೇಖನ.

—ನಯನ, ಮೈಸೂರು

## ವೈವಿಧ್ಯ ನಿಲುವು

‘ಕಾಡಿನಲ್ಲೊಂದು ನಡಿಗೆ’ (ನ. 20, ಜಿ.ವಿ. ಆನಂದ ಮೂರ್ತಿ) ‘ವಿಚಾರ ಲಹರಿ’ ಅರ್ಥಪೂರ್ಣವಾಗಿದೆ. ಅರಣ್ಯ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿದ ನನ್ನ ಆತ್ಮೀಯರೊಬ್ಬರು ‘ಕಚೇರಿಯಲ್ಲಿ ಸಮಸ್ಯೆ ಎದುರಾದಾಗ ತಕ್ಷಣ ಕಾಡಿನಲ್ಲಿ ವಾಕಿಂಗ್ ಹೋಗುತ್ತಿದ್ದೆ, ಹಿಂದಿರುಗುವುದರೊಳಗೆ ಸಮಸ್ಯೆಗೆ ಪರಿಹಾರ ಸಿಗುತ್ತಿತ್ತು’ ಎನ್ನುತ್ತಿದ್ದರು. ನನಗೋ ಆಶ್ಚರ್ಯ, ಕಾಡಿನಲ್ಲಿ ವನದೇವತೆ ಪ್ರತ್ಯಕ್ಷವಾಗಿ ಇವರಿಗೆ ಪರಿಹಾರ ಕೊಡುತ್ತಿದ್ದರೇನೋ ಎಂದು. ಬರಹ, ವೈವಿಧ್ಯ ನಿಲುವನ್ನು ನೀಡುತ್ತ ಹೊಸ ಆಲೋಚನೆಯ ಸೃಷ್ಟಿಗೆ ಕಾರಣವಾಯಿತು.

—ಧನಲಕ್ಷ್ಮಿ ಪುರುಷೋತ್ತಮರಾವ್, ಕೋಲಾರ



## ಸ್ಫೂರ್ತಿದಾಯಕ ಲೇಖನ

‘ಆಡೂ... ಆಟ ಆಡು...’ (ನ. 20, ಗಿರೀಶ ದೊಡ್ಡಮನಿ) ಮುಖಪುಟ ಲೇಖನದಲ್ಲಿ ಕ್ರೀಡಾಕ್ಷೇತ್ರದಲ್ಲಿ ಮಹಿಳೆಯರಿಗಿರುವ ಸವಾಲುಗಳು, ಅಡೆತಡೆಗಳು, ಸಾಮಾಜಿಕ ಒತ್ತಡಗಳು, ಅವನ್ನು ಮೆಟ್ಟಿನಿಂತ ಅವರ ಸಾಧನೆಯ ಕುರಿತ ವಿವರಣೆ ಸ್ಫೂರ್ತಿದಾಯಕವಾಗಿದೆ. ಸಮಾಜ ಎಷ್ಟೇ ಅಭಿವೃದ್ಧಿಯಾದರೂ ಮಹಿಳೆಯರಿಗೆ ಸಮಾನ ಅವಕಾಶ, ಸಮಾನ ವೇತನ ಇನ್ನೂ ದೂರವುಳಿದ ಸಂಗತಿಗಳು. ಇಂಥ ತರತಮಗಳನ್ನು ನಿವಾರಿಸಿದಲ್ಲಿ ಇನ್ನಷ್ಟು ಮಹಿಳಾ ಕ್ರೀಡಾಪಟುಗಳು ಉದಯಿಸುವಲ್ಲಿ ಸಂಶಯವಿಲ್ಲ.

—ಚೇತನಾ ಎಸ್.ಕೆ., ಮೈಸೂರು




## ಹೆಣ್ಣುಮಕ್ಕಳಿಗೆ ಸಂದ ಜಯ

‘ಗೆಲುವಿನ ಹೂನಗೆ... ಸಂಭ್ರಮದ ಈ ಬಗೆ’ (ನ. 20, ವಿಶಾಖ ಎನ್.) ವಿವರಣಾತ್ಮಕ ಬರಹ ಮನಸೂರೆಗೊಂಡಿತು. ಭಾರತದ ಮಹಿಳಾ ಕ್ರೀಡಾಪಟುಗಳು ವಿಶ್ವಕಪ್ ಗೆದ್ದದ್ದು ಹೆಣ್ಣುಕುಲಕ್ಕೆ ಸಂದ ಜಯ. ಅನೇಕ ಬಾರಿ ಸೋತರೂ ಸೋಲೇ ಗೆಲುವಿನ ಸೋಪಾನ ಎನ್ನುವ ಹಾಗೆ ಮರಳಿ ಮರಳಿ ಪ್ರಯತ್ನ ಮಾಡಿ ಕೀರ್ತಿ ಗಳಿಸಿದ್ದಾರೆ.

ಆಟಗಾರ್ತಿಯರ ಪೋಷಕರು ಆರ್ಥಿಕವಾಗಿ ಸಬಲರಲ್ಲದಿದ್ದರೂ ಪ್ರೋತ್ಸಾಹಿಸಿದ್ದಾರೆ. ಅವರಿಗೂ ಸಂದ ಗೌರವವಿದು. ಶಫಾಲಿ ಶರ್ಮಾ ಆತ್ಮ ವಿಶ್ವಾಸ, ಹರ್ಮನ್ ಪ್ರೀತ್ ಸಮಯಪ್ರಜ್ಞೆ, ಅಮನ್ಜೋತ್ ಹಿಡಿದ ಅಮೂಲ್ಯ ಕ್ಯಾಚ್ ಹೀಗೆ ಆಟಗಾರ್ತಿಯರು ತಮ್ಮ ಮನೋಬಲದಿಂದ ವಿಶ್ವಕಪ್ ಗೆದ್ದು ಖ್ಯಾತಿ ಗಳಿಸಿದ್ದಾರೆ.

—ಮಧುರ, ಬೆಂಗಳೂರು

## ರೋಮ್ ಮೋಹ ಕಾಡದೇ ಬಿಡದು!

‘ರೋಮ್‌ನಲ್ಲಿ ಕೀಟ್ಸ್ ಕೊನೆಯ ಹಾಡು’ (ನ. 20, ಸುಚಿತ್ರಾ ಹೆಗಡೆ) ಪ್ರವಾಸ ಕಥನ ಸುಂದರವಾಗಿದೆ. ಪ್ರಸಿದ್ಧ ಕವಿ ಕೀಟ್ಸ್ ಕೊನೆಯ ದಿನಗಳ ಬಗ್ಗೆ ಓದಿ ಬೇಸರ ಕಾಡಿತು. ‘ಅಮರ ನಗರ’ವೆಂದೇ ಹೆಸರಾದ ರೋಮಿನ ಮೋಹಕ್ಕೆ ತುತ್ತಾಗದವರಾರು ಎಂದೂ ಅನಿಸಿತು. ಕೀಟ್ಸ್, ಶೆಲ್ಲಿ ಮ್ಯೂಸಿಯಮ್ಮಿನ ವಿವರ ಆಸಕ್ತಿದಾಯಕವಾಗಿದೆ.

—ಎಸ್. ಚನ್ನಬಸವ, ಬೆಂಗಳೂರು

## ಮರೆಯಲಾರದ ಸಾಲುಗಳು

ವೈದ್ಯರ ಸಲಹೆ ಮೇರೆಗೆ ಪ್ರಸಿದ್ಧ ಕವಿ ಕೀಟ್ಸ್ ಇಂಗ್ಲೆಂಡ್‌ನ ಚಳಿಯ ವಾತಾವರಣದಿಂದ ಶಾಖದ ವಾತಾವರಣದ ರೋಮ್‌ಗೆ ಹೋದರೂ ಬಹುಕಾಲ ಬದುಕುಳಿಯಲು



ಸಾಧ್ಯವಾಗದ್ದು, ತನ್ನ ಕೊನೆಯ ದಿನಗಳಲ್ಲಿ ‘ನನ್ನ ಮೇಲೆ ಡೇಸಿ ಹೂಗಳು ಅರಳುತ್ತಿರುವಂತೆ ಭಾಸವಾಗುತ್ತಿದೆ’ ಅಂದಿದ್ದು, ಮರಣದ ನಂತರ ತನ್ನ ಸಮಾಧಿ ಮೇಲೆ ‘ಇಲ್ಲಿ ವಿರಮಿಸಿದವನ ಹೆಸರನ್ನು ನೀರಿನಲ್ಲಿ ಬರೆಯಲಾಗಿದೆ’ ಎಂದಷ್ಟೇ ಬರೆಯಬೇಕೆಂದು ಕಟ್ಟಪ್ಪಣೆ ಮಾಡಿದ್ದು, ಈ ಸಂಗತಿಗಳೆಲ್ಲ ಆಸಕ್ತಿದಾಯಕ ಎನಿಸಿದವು.

—ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in